genesis
Burson-Marsteller

impact
www.impactmeasurement.co.in

Date : 09-Apr-2012 Edition : Bangalore Page No.: 11 Page Name: Creeda Sudhi Size: 241.7 sq. cm

Sector: Others Circulation: 254574 AVE: INR 369805.73 Frequency: Daily

Publication: Prajavani Title: T-20 good in football : Kohli

News Monitored for: Pepsi - Brands

ಪ್ರಜಾವಾಣಿ

# ಫುಟ್‌ಬಾಲ್‌ನಲ್ಲೂ ಟಿ-20 ಉತ್ತಮ: ಕೊಹ್ಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಟಿ-20 ಮಾದರಿ ಕೇವಲ ಕ್ರಿಕೆಟ್‌ಗೆ ಮಾತ್ರ ಮೀಸಲಾಗಿತ್ತು. ಈ ಚುಟುಕು ಆಟ ಈಗ ಫುಟ್‌ಬಾಲ್‌ಗೂ ಕಾಲಿಟ್ಟಿದ್ದು ಈ ಕ್ರೀಡೆಯ ಇನ್ನಷ್ಟು ಬೆಳವಣಿಗೆಗೆ ಮುನ್ನುಡಿಯಾಗಲಿದೆ' ಎಂದು ಭಾರತ ತಂಡದ ವಿರಾಟ್ ಕೊಹ್ಲಿ ಹೇಳಿದರು.

ಉದ್ಯಾನನಗರಿಯಲ್ಲಿ ಭಾನುವಾರ ನಡೆದ ಹವ್ಯಾಸಿ ಆಟಗಾರರ ಪೆಪ್ಸಿ ಟಿ-20 ಫುಟ್‌ಬಾಲ್ ಟೂರ್ನಿಯ ವೇಳೆ ಅವರು ಮಾತನಾಡಿದರು.

'ಐಪಿಎಲ್, ಚಾಂಪಿಯನ್ಸ್ ಲೀಗ್ ಹಾಗೂ ಟಿ-20 ವಿಶ್ವಕಪ್ ಟೂರ್ನಿಗೆ ಮಾತ್ರ ಚುಟುಕು ಆಟ ಮೀಸಲಾಗಿತ್ತು. ಈಗ ಫುಟ್‌ಬಾಲ್ ಕ್ರೀಡೆಯಲ್ಲಿಯೂ ಈ ಮಾದರಿಯಲ್ಲಿ ಪಂದ್ಯಗಳು ನಡೆಸುತ್ತಿರುವುದು ಈ ಕ್ರೀಡೆಗೆ ಏಳಿಗೆಗೆ ಸಹಕಾರಿಯಾಗಲಿದೆ' ಎಂದು ಬಲಗೈ ಬ್ಯಾಟ್ಸ್‌ಮನ್ ಅಭಿಪ್ರಾಯ ಪಟ್ಟರು.

'ಕ್ರಿಕೆಟ್ ಪಂದ್ಯಕ್ಕಾಗಿ ಅಭ್ಯಾಸ ನಡೆಸುವಾಗ ನಾವು ಸಾಕಷ್ಟು ಸಲ ಫುಟ್ ಬಾಲ್ ಆಡಿದ್ದೇವೆ. ಈ ಕ್ರೀಡೆಯ ಮೂಲಕ ದೈಹಿಕ ಕಸರತ್ತು ನಡೆಸುತ್ತೇವೆ. ಆದರೆ, ಪಂದ್ಯವನ್ನಾಡುವುದು ವಿಭಿನ್ನ ಅನುಭವ ನೀಡುತ್ತದೆ. ಮೊದಲಿನಿಂದಲೂ ಈ ಕ್ರೀಡೆಯ ಬಗ್ಗೆ ಆಸಕ್ತಿ ಇದೆ' ಎಂದು ಕೊಹ್ಲಿ ಮನದಾಳದ ಮಾತನ್ನು ಬಿಚ್ಚಿಟ್ಟರು.



ಬೆಂಗಳೂರಿನಲ್ಲಿ ನಡೆದ ಟಿ-20 ಫುಟ್‌ಬಾಲ್ ಟೂರ್ನಿಯ ವೇಳೆ ಆಗಮಿಸಿದ್ದ ಕ್ರಿಕೆಟಿಗ ವಿರಾಟ್ ಕೊಹ್ಲಿ ಆಟವಾಡಿ ಸಂಭ್ರಮಿಸಿದ್ದು ಹೀಗೆ ಪ್ರಜಾವಾಣಿ ಚಿತ್ರ

'ಕ್ರಿಕೆಟ್ ಜೊತೆಗೆ ಎಲ್ಲಾ ಕ್ರೀಡೆಗಳಿಗೂ ಮಹತ್ವ ಸಿಗಬೇಕು. ಈ ಹೊಸ ಮಾದರಿಯ ಆಟದಿಂದ ಫುಟ್‌ಬಾಲ್‌ಗೆ ಯಾವುದೇ ಕ್ಷೇತ್ರವಿರಲಿ ಯಶಸ್ಸು ಇನ್ನಷ್ಟು ಖ್ಯಾತಿ ಲಭಿಸಬಹುದು. ಸಾಧಿಸಬೇಕಾದರೆ ಕಠಿಣ ಶ್ರಮ ಅಗತ್ಯ' ಎಂದು ಕಿವಿಮಾತು ಹೇಳಿದರು.

ಐಪಿಎಲ್ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಈ ಟೂರ್ನಿಯಲ್ಲಿ ಇದುವರೆಗೆ ಪ್ರಶಸ್ತಿ ಗೆಲ್ಲಲು ಸಾಧ್ಯವಾಗಿಲ್ಲ. ಆದರೆ, ಈ ಸಲ ಉತ್ತಮ ಅವಕಾಶ ಲಭಿಸಿದೆ. ಕ್ರಿಸ್ ಗೇಲ್, ಜಹೀರ್ ಖಾನ್, ಡೇನಿಯಲ್ ವೆಟೋರಿ ಅವರಂತಹ ಬಲಿಷ್ಠ ಆಟಗಾರರು ತಂಡದಲ್ಲಿದ್ದಾರೆ. ಮೊದಲ ಪಂದ್ಯದಲ್ಲಿ ಸಿಕ್ಕ ಗೆಲುವು ಸಾಕಷ್ಟು ಆತ್ಮವಿಶ್ವಾಸ ಮೂಡಿಸಿದೆ. ಈ ಸಲ ಪ್ರಶಸ್ತಿ ಜಯಿಸುತ್ತೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಏನಿದು ಟಿ-20 ಫುಟ್‌ಬಾಲ್: ಹವ್ಯಾಸಿ ಆಟಗಾರರು ಸೇರಿ ಮಾಡಿಕೊಂಡ ಫುಟ್‌ಬಾಲ್ ಕ್ರೀಡೆಯ ಮಾದರಿಯಿದು. ಈ ಟೂರ್ನಿಗೆ ಫುಟ್ ಬಾಲ್ ಕ್ರೀಡಾಂಗಣ ಚಿಕ್ಕದಾಗಿರುತ್ತದೆ. ಒಂದು ತಂಡದಲ್ಲಿ ಏಳು ಆಟಗಾರರಿದ್ದು, 20 ನಿಮಿಷ ಪಂದ್ಯದ ಕಾಲಾವಧಿ. ನಗರದ ಒಟ್ಟು 32 ತಂಡಗಳು ಈ ಟೂರ್ನಿಯಲ್ಲಿ ಪಾಲ್ಗೊಂಡಿದ್ದವು.

ಇಲ್ಲಿ ಚಾಂಪಿಯನ್ ಆದ ತಂಡ ಈ ವರ್ಷದ ಜೂನ್‌ನಲ್ಲಿ ನವದೆಹಲಿಯಲ್ಲಿ ನಡೆಯುವ ರಾಷ್ಟ್ರೀಯ ಟೂರ್ನಿಯಲ್ಲಿ ಬೆಂಗಳೂರನ್ನು ಪ್ರತಿನಿಧಿಸಲಿದೆ. ದೆಹಲಿ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲುವ ತಂಡಕ್ಕೆ ಅಂತರರಾಷ್ಟ್ರೀಯ ಫುಟ್‌ಬಾಲ್ ತಾರೆಯೊಬ್ಬರು ತರಬೇತಿ ನೀಡಲಿದ್ದಾರೆ. ಈ ತಂಡ ಭಾರತ ಕ್ರಿಕೆಟ್ ತಂಡದ ಜೊತೆಗೆ ಫುಟ್‌ಬಾಲ್ ಪಂದ್ಯವನ್ನು ಆಡಲಿದೆ.



© Prajavani